ಸ್ಥಳೀಯ ಸಂಪನ್ಮೂಲ ಕ್ರೋಢೀಕರಿಸಿ ಪೂರ್ಣಗೊಳಿಸಬೇಕಾಗಿದೆ

ಉಡುಪಿ ಜಿಲ್ಲೆಗೆ ಸಂಬಂದಿಸಿದಂತೆ ಕಾಪುವಿನ ಕ್ಷೇತ್ರ ವ್ಯಾಪ್ತಿಯಲ್ಲಿ ಬಯಲು ರಂಗ ಮಂದಿರ ನಿರ್ಮಿಸಲು ಸ್ಪಂದನ ಸಾಂಸ್ಕೃತಿಕ ಕಲಾ ವೇದಿಕೆ, ಕುಂಜಾಲುಗಿರಿ, ಕುರ್ತಾಲು ಗ್ರಾಮ ಪಂಚಾಯಿತಿ, ಉಡುಪಿ ತಾಲ್ಲೂಕು ಇವರಿಗೆ ಉಡುಪಿ ಜಿಲ್ಲಾ ಪಂಚಾಯಿತಿಯಿಂದ ರೂ 50 000 –00 ಗಳ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗಿದೆ

ಆ) ವಿಷಯ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 13 ರಲ್ಲಿರುವ ಆಲೂರಿನ ಆಸ್ಪತ್ರೆ ಮತ್ತು ರಸ್ತೆ ಸುಧಾರಣೆ ಬಗ್ಗೆ

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಂಟುಂಬ ಕಲ್ಯಾಣ ಸಚಿವರು)

ಆಲೂರು ಗ್ರಾಮ ರಾಷ್ಟ್ರೀಯ ಹೆದ್ದಾರಿ–13ರ ರಿಂದ 2 ಕಿ ಮೀ ಒಳಗಿರುತ್ತದೆ ಇಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವು ಕಾರ್ಯನಿರ್ವಹಿಸುತ್ತದೆ ರಾಜ್ಯ ಸರ್ಕಾರವು ದಿನಾಂಕ 2/6/2007ರಂದು ಹೊರಡಿಸಿರುವ ಆದೇಶದ ಪ್ರಕಾರ 516 ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಿದೆ ಅದರಲ್ಲಿ ಇದು ಕುಡ ಒಂದಾಗಿದೆ ವಿಶೇಷ ಪ್ಯಾಕೇಜ್ ಅಡಿಯಲ್ಲಿ ಸದರಿ ಆರೋಗ್ಯ ಕೇಂದ್ರಕ್ಕೆ ಆಪರೇಷನ್ ಧಿಯೇಟರ್ ಹಾಗೂ ಹೆರಿಗೆ ವಾರ್ಡಗಳನ್ನು ಹೂಸದಾಗಿ ಕಟ್ಟುವ ಕಾಮಗಾರಿ ಪ್ರಾರಂಭವಾಗಿರುತ್ತದೆ ಅದೇ ತರಹ ವೈದ್ಯರ ವಸತಿ ಗೃಹ ಸಹ ಇದೇ ಪ್ಯಾಕೇಜ್‌ನಲ್ಲಿ ತೆಗೆದುಕೊಳ್ಳಲಾಗಿದೆ, ಈ ಕಾಮಗಾರಿಯು ಇನ್ನೂ ಪೂರ್ಣಗೊಂಡಿರುವುದಿಲ್ಲ

ಇಲ್ಲಿ ಎರಡು ಕಿರಿಯ ಮಹಿಳಾ ಆರೋಗ್ಯ ಸಹಾಯಕಿ ಹಾಗೂ "ಡಿ" ವರ್ಗದ ವಸತಿ ಗೃಹಗಳು ಸಹ ಇರುತ್ತದೆ ಇದರಲ್ಲಿ ಅವರುಗಳು ವಾಸವಾಗಿರುತ್ತಾರೆ

ದಿನಾಂಕ 13/5/2007ರಂದು ಬೆಳಗಿನ ಝಾವ ಸುಮಾರು 5 00

ಗಂಟೆ ಸಮಯದಲ್ಲಿ ರಾಷ್ಟ್ರೀಯ ಹೆದ್ದಾರಿ–13 ರಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಹೊಸಹಳ್ಳಿಯಿಂದ 3 ಕಿ ಮೀ ದೂರದ ಸ್ಥಳದಲ್ಲಿ ವಾಹನ ಅಫಘಾತಕ್ಕೀಡಾಗಿರುತ್ತದೆ ಸದರಿ ವಾಹನದಲ್ಲಿ ಪ್ರಯಾಣಿಸುತ್ತಿದ್ದ ಜನರಲ್ಲಿ 18 ಜನ ಮೃತಪಟ್ಟಿದ್ದು, ಅವರ ಶವಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ಹೊಸಹಳ್ಳಿಗೆ ಅಂಬುಲೆನ್ಸ್ ಮೂಲಕ ಸಾಗಿಸಿ, ಸಾರ್ವಜನಿಕ ಆಸ್ಪತ್ರೆ, ಕೂಡ್ಲಗಿ, ಸಮುದಾಯ ಆರೋಗ್ಯ ಕೇಂದ್ರ, ಸಿ ಜೆ ಹಳ್ಳಿ, ಕೂಟ್ಲೂರು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಉಜ್ಜನಿ ಮತ್ತು ಬೆಳ್ಳಿಗಟ್ಟಿಯಿಂದ ವೈದ್ಯರನ್ನು ಕರೆಯಿಸಿ ಶವ ಪರೀಕ್ಷೆ ನಡೆಸಲಾಯಿತು ಸಣ್ಣ ಪುಟ್ಟ ಗಾಯಗೊಂಡ ಜನರನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ಹೊಸಹಳ್ಳಿಯಲ್ಲಿ ಪ್ರಥಮ ಚಿಕಿತ್ಸೆ ನೀಡಿದ ನಂತರ ಸಾರ್ವಜನಿಕ ಆಸ್ಪತ್ರೆ ಕೂಡ್ಲಿಗಿಗೆ ಆಂಬುಲೆನ್ಸ್ ಮೂಲಕ ಸಾಗಿಸಿ ಚಿಕಿತ್ಸೆ ನೀಡಲಾಯಿತು ಕೆಲವು ಚಿಂತಾನಜಕ ಸ್ಥಿತಿಯಲ್ಲಿದ್ದ ಗಾಯಾಳುಗಳನ್ನು ಆಂಬುಲೆನ್ಸ್‌ನಲ್ಲಿ ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗಕ್ಕೆ ಹೆಚ್ಚಿನ ಚಿಕಿತ್ಸೆಗೆ ಕಳುಹಿಸಲಾಯಿತು

ಸಾರ್ವಜನಿಕ ಆಸ್ಪತ್ರೆ, ಕೂಡ್ಲಿಗಿಯು ರಾಷ್ಟ್ರೀಯ ಹೆದ್ದಾರಿ–13ರಲ್ಲಿರುವುದರಿಂದ ಟ್ರಾಮಕೇರ್ ಸೆಂಟರ್ ಮಂಜೂರಾಗಿರುತ್ತದೆ ಈಗಾಗಲೇ ಕಟ್ಟಡದ ಕಾಮಗಾರಿ ಕಾರ್ಯ ಪ್ರಾರಂಭಗೊಂಡಿರುತ್ತದೆ

ಶ್ರೀಮತಿ ಭಾಗೀರಥಿ ಟಿ ಮಾನ್ಯ ಅಧ್ಯಕ್ಷರೆ, ಇಲ್ಲಿ ಮಾಹಿತಿ ತಪ್ಪಾಗಿದೆ 21ಜನ ಮೃತಪಟ್ಟಿರುವಂತಹ ಧಾರುಣ ಘಟನೆಯನ್ನು ತಾವೆಲ್ಲಾ ಟಿವಿಯಲ್ಲಿ ನೋಡಿದ್ದೀರಿ ನಾನು ಹಿಂದೆ ನಡೆದ ಅಧಿವೇಶನದಿಂದ ಈ ಅದಿವೇಶನದವರೆಗೆ ಹಲವು ವಿಚಾರಗಳನ್ನು ತಿಳಿಸಿದ್ದೇನೆ ಹೊಸ ಹಳ್ಳಿಯಲ್ಲಿ ಯಾವುದೇ ಟ್ರಾಮ ಸೆಂಟರ್ ಇಲ್ಲ ಇಲ್ಲಿ ಆಂಬುಲೆನ್ಸ್ ಕೂಡ ಇಲ್ಲ ಆಲೂರಿನಲ್ಲಿರುವುದು ಪ್ರಾಥಮಿಕ ಆರೋಗ್ಯ ಘಟಕ ಇದು PHC ಕೂಡ ಆಗಿಲ್ಲ PHC ಯನ್ನು ಮೇಲ್ಜರ್ಜೆಗೇರಿಸುತ್ತೇವೆ ಎಂದು ಹೇಳಿದ್ದೀರಿ ಅಲ್ಲಿ ಇದ್ದಂತಹ ಒಬ್ಬ ಮಹಿಳಾ ವೈದ್ಯರನ್ನು ವರ್ಗಾವಣೆ ಮಾಡಿದ್ದೀರಿ ಅಲ್ಲಿ ಒಬ್ಬ ANMs ಇಲ್ಲ ಯಾವುದೇ ವೈದ್ಯರು ಕೂಡ ಇಲ್ಲ ದಿನ ನಿತ್ಯ ನಾನು ಈ ಕೆಲಸ ಮಾಡಬೇಕು ಆದ್ದರಿಂದ ಕೂಡ್ಲಿಗಿಯಿಂದ ಚಿತ್ರದುರ್ಗದವರೆಗೆ ಸುಮಾರು 80 ಕಿ ಮಿ ನಡುವೆ ನಮಗೆ ಯಾವುದೇ ಈ ರೀತಿಯ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ ತಕ್ಷಣ

ಅಲ್ಲಿಗೆ ಒಂದು ಆಂಬುಲೆನ್ಸ್ ಒದಗಿಸಬೇಕು ಇಡೀ ಕ್ಷೇತ್ರದಲ್ಲಿ ಯಾವುದಾದರೂ ಒಂದು ಆಸ್ಪತ್ರೆ ಫುಲ್ ಪ್ಲೆಡ್ಜ್ಡ್ ಇದ್ದರೆ ನಾವು ಕೆಲಸ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಕೆಲವು ಆಸ್ಪತ್ರೆಗಳಲ್ಲಿ ಡಾಕ್ಟರ್ ಇರುತ್ತಾರೆ, ಕೆಲವು ಆಸ್ಪತ್ರೆಗಳಲ್ಲಿ ಔಷಧಿ ಇರುವುದಿಲ್ಲ, ದಯವಿಟ್ಟು ತಾವು ಸಂಪೂರ್ಣವಾದ ವರದಿ ತರಿಸಿಕೂಂದು ಈ 80ಕಿ ಮಿ ನಡುವೆ ನನ್ನ ಕ್ಷೇತ್ರದಲ್ಲಿ ಒಂದು ಟ್ರಾಮ ಸೆಂಟರ್‌ನ್ನು ಮಾಡಿಕೂಡಬೇಕು ಟ್ರಾಮ ಸೆಂಟರ್ ಮಾಡಿ ಅಲ್ಲಿ ಯಾರೂ ಇಲ್ಲದ ಹಾಗೆ ಮಾಡಬಾರದು ಈ ವಿಚಾರದಲ್ಲಿ ನನಗೆ ತೂಂದರೆಯಾಗುತ್ತಿದೆ ಪ್ರತಿನಿತ್ಯ ನಾನು ಬೆಂಗಳೂರಿಗೆ ಬರಬೇಕಾದರೆ ಎಲ್ಲ ಕೆಲಸ ಮಾಡಿ ಬರಬೇಕಾಗುತ್ತದೆ ಈ ಅಪಘಾತದ ವಲಯವೆಂದು ನಾವು ಹೆಸರು ಇಟ್ಟಿದ್ದೇವೆ ನಾವು ಅಲ್ಲಿಂದ ಹಾಗೇಯೇ ಬರುವ ಹಾಗಿಲ್ಲ ದಯಮಾಡಿ ತಾವು ಅಲ್ಲಿ ಒಂದು ಆಸ್ಪತ್ರೆಯನ್ನು ಕೂಡಬೇಕು NH 4ನಲ್ಲಿರುವ ಹೊಸ ಹಳ್ಳಿಯ ಆಸ್ಪತ್ರೆಗೆ ಸಂಪೂರ್ಣ ಪರಿಕರಗಳನ್ನು ಒದಗಿಸಿ ಈ ರೀತಿಯ ಕೆಲಸಗಳಿಗೆ ಸಹಾಯ ಮಾಡಬೇಕೆಂದು ಸಭಾಧ್ಯಕ್ಷರ ಮೂಖಾಂತರತಮ್ಮ ಗಮನಕ್ಕೆ ತರುತ್ತಿದ್ದೇನೆ

ಶ್ರೀ ಆರ್ ಅಶೋಕ್ ಡಾಕ್ಟರ್ ವರ್ಗಾವಣೆ ಆಗಿ ಬೇರೆ ಕಡೆ ಹೋಗಿದ್ದಾರೆ ಡಾಕ್ಟರ್‌ರನ್ನು ಪೋಸ್ಟ್ ಮಾಡುವ ಬಗ್ಗೆ ನಾನು ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ

ಅಧ್ಯಕ್ಷರು ಶಾಸನ ರಚನೆ ಇದೆ, ತೆಗೆದುಕೊಳ್ಳೋಣವಾ?

ಶ್ರೀ ಜೆ ಸಿಮಾಧುಸ್ವಾಮಿ ಇವತ್ತು ಶುಕ್ರವಾರ ಇವತ್ತು ಹೇಗೆ ಶಾಸನ ರಚನೆ ತೆಗೆದುಕೊಳ್ಳುತ್ತೀರಿ? ಖಾಸಗಿ ಸದಸ್ಯರ ನಿರ್ಣಯಗಳನ್ನು ತೆಗೆದುಕೊಳ್ಳಬೇಕು ಶುಕ್ರವಾರವೂ ಖಾಸಗಿ ಸದಸ್ಯರ ನಿರ್ಣಯ ತೆಗೆದು ಕೂಳ್ಳುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

ಶ್ರೀ ಜಿ ವಿ ಶ್ರೀರಾಮರೆಡ್ಡಿ APMC Act ಕಳೆದ ಸಾರಿ ಮೂವ್ ಆಗಿ ನಾವು ಅದನ್ನು ವಿರೋಧ ಮಾಡಿ ವಾಪಸ್ ಹೋಗಿದೆ ಶುಕ್ರವಾರ ಅನದಿಕೃತವಾದ ದಿವಸ ಅದಕೃತವಾದ ಬಿಲ್ಲನ್ನು ಪಾಸ್ ಮಾಡುವುದಕ್ಕೆ ಹೇಗೆ ಆಗುತ್ತದೆ?

ಅಧ್ಯಕ್ಷರು ನಾಳೆ ತೆಗೆದುಕೊಳ್ಳೋಣವೆಂದು ಬಿಲ್ ಮಂಡನೆಯಾದಾಗ ನೀವೆ ಹೇಳಿದ್ದೀರಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಇವತ್ತು ಆಗುವುದಿಲ್ಲ, ಬೇಕಾದರೆ ಸೋಮವಾರ ತೆಗೆದುಕೊಳ್ಳಿ ಇವತ್ತು ನಾವು ಬಿಲ್ ಪಾಸ್ ಮಾಡುವುದ ಕ್ಕಾಗುತ್ತಾ?

ಶ್ರೀ ಜೆ ಸಿ ಮಾಧುಸ್ವಾಮಿ ಮದುವೆ ಮಾಡುವದರ ಬಗ್ಗೆ ಏನಾದರೂ ಒಂದು ತೀರ್ಮಾನವಾಗಬೇಕು ಖಾಸಗಿ ನಿರ್ಣಯವನ್ನು ದಯವಿಟ್ಟು ಇವತ್ತು ಮುಗಿಸಿಕೊಡಿ ನಾವು ಬೇರೆ ಎರಡು ಮೂರು ನಿರ್ಣಯಗಳನ್ನು ಮೂವ್ ಮಾಡುವವರಿದ್ದೇವೆ

ಶ್ರೀ ಜಿ.ವಿ ಶ್ರೀರಾಮರೆಡ್ಡಿ APMC ಬಿಲ್ಲನ್ನು ಶುಕ್ರವಾರ ತೆಗೆದುಕೊಳ್ಳವುದಕ್ಕಾಗುವುದಿಲ್ಲ ಸೋಮವಾರ ತೆಗೆದುಕೊಳ್ಳಿ

ಶ್ರೀ ಎನ್ ಧರ್ಮ್‌ಸಿಂಗ್ ಈ ಬಿಲ್ಲನ್ನು ಸೋಮವಾರ ತೆಗೆದುಕೊಳ್ಳಿ, ಈಗ ಖಾಸಗಿ ನಿರ್ಣಯದ ಮೇಲೆ ಚರ್ಚೆ ಮಾಡಿ

ಅಧ್ಯಕ್ಷರು ಖಾಸಗಿ ನಿರ್ಣಯ ತೆಗೆದುಕೊಳ್ಳೋಣ, ಈ ಸದನ ಯಾವುದೇ ಒಂದು ತೀರ್ಮಾನ ತೆಗೆದುಕೊಳ್ಳದೆ ಅದು ಸಮಾಜದಲ್ಲಿ ಬೈಂಡಿಗ್ ಆಗುತ್ತದೆ

ಶ್ರೀ ಎನ್ ಧರ್ಮ್‌ಸಿಂಗ್ AMPC Act ಬಗ್ಗೆ ಸೋಮವಾರ ಚರ್ಚೆ ತೆಗೆದುಕೊಳ್ಳಿ, ಖಾಸಗಿ ನಿರ್ಣಯದ ಮೇಲೆ ಚರ್ಚೆ ಪ್ರಾರಂಭ ಮಾಡಿ ಮುಗಿಸಿಬಿಡಿ

ಶ್ರೀ ಜೆ ಸಿ ಮಾಧುಸ್ವಾಮಿ ನಿಯಮ 234ರ ಕೆಳಗೆ ನಾನು ಒಂದು ನೋಟಿಸ್ ಕೊಟ್ಟಿದ್ದೇನೆ ಆ ಮೇಲೆ ಅವಕಾಶ ಕೊಡುತ್ತೇನೆ ಎಂದು ಹೇಳಿದಿರಿ

ಅಧ್ಯಕ್ಷರು ಆಯಿತು ನೀವು ಪ್ರಸ್ತಾಪ ಮಾಡಿ

4 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ವಿಷಯ ಸಾರ್ವಜನಿಕ ಉದ್ದಿಮೇಳ ಸಮಿತಿಯ ವರದಿಯನ್ನು ಸದನದಲ್ಲಿ ಚರ್ಚಿಸುವ ಬಗ್ಗೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಉದ್ಯಮಗಳ ಸಮಿತಿಯವರು ಏನು ಅವರ ವರದಿಯನ್ನು ಸದನದಲ್ಲಿ ಮಂಡಿಸಿದ್ದಾರೆ, ಆ ವರದಿಯನ್ನು ಚರ್ಚೆ ಮಾಡಲಿಕ್ಕೆ ನಾನು ತಮ್ಮ ಅವಕಾಶವನ್ನು ಕೋರುತ್ತಿದ್ದೇನೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ನಿಯಮ 234ರ ಕೆಳಗೆ ಮಾನ್ಯ ಮಾಧುಸ್ವಾಮಿಯವರು ಕೊಟ್ಟಿರತಕ್ಕಂಥದ್ದು ತಾವು ಇಲ್ಲಿ ತೆಗೆದುಕೊಂಡಿದ್ದೀರೆ ನನಗೆ ಒಂದು ಈ ಸಂಪ್ರದಾಯಗಳ ಬಗ್ಗೆ ಮತ್ತು ಇಲ್ಲಿಯವರೆಗೆ ನಡೆದಿರತಕ್ಕಂತಹ 1950ರ ನಂತರ ಇಂತಹ ಯಾವುದೇ ವಿಚಾರವನ್ನು ಕಮಿಟಿ ರಚನೆ ಮಾಡಿರತಕ್ಕಂತಹ ವರದಿ ಬಗ್ಗೆ ಲೋಕಸಭೆಯಲ್ಲಿ ಒಂದು ಬಾರಿ ಚರ್ಚೆ ಆಗಿರುವುದು ಬಿಟ್ಟರೆ ಬೇರೆ ಎಲ್ಲಿಯೂ, ಚರ್ಚೆಯಾಗಿಲ್ಲ ಹಾಗೆಯೇ ನಮ್ಮ ವಿಧಾನಸಭೆಯಲ್ಲಿ ಹಿಂದೆ ಒಂದು ಸಲ ವಿರೋಧಪಕ್ಷದ ನಾಯಕರಾದ ಶ್ರೀ ಎಸ್ ಆರ್ ಬೊಮ್ಮಾಯಿಯವರು ಮತ್ತು ಹಾಗೆಯೇ ಅಲ್ಲಿ ಲಕ್ಷ್ಮಿಸಾಗರ್‌ರವರು ಕೊಟ್ಟಿರತಕ್ಕಂತಹ ಎರಡು ಸೂಚನೆಗಳ ಹಿನ್ನಲೆಯಲ್ಲಿ ಒಂದು ಸಲ ಸಿಮೆಂಟ್ [illegible] PAC ಯಲ್ಲಿ ಚರ್ಚೆಯಾಗಿತ್ತು ಅದು ಬಿಟ್ಟರೆ ಪ್ರಾಯಶ ಇಂಥದು ಯಾವಾಗಲೂ ಕೂಡ ಆಗಿಲ್ಲ ಆದ್ದರಿಂದ ಸನ್ಮಾನ್ಯ